## ದಿನಾಂಕ :03-04-2021 ರಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್ ಸಂಖ್ಯೆ-161 ರ ವಾರ್ಡ್ ಸಮಿತಿಯ ಸಭೆಯ ನಡವಳಿಗಳು :-

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಅಭಿಯಂತರರು ಹೊಸಕೆರೆಹಳ್ಳಿ ವಾರ್ಡ್ ಸಂಖ್ಯೆ-161 ರವರಾದ ಶ್ರೀ ವೆಂಕಟಮಲಯ್ಯ, ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು

ನೋಡೆಲ್ ಅಧಿಕಾರಿಗಳ ಜೊತೆಯಲ್ಲಿ ಸಭೆಯನ್ನು ಆಯೋಜಿಸಲಾಗಿದ್ದು, ಪ್ರಥಮವಾಗಿ ಈ ಹಿಂದಿನ ಸಭೆಯ ನಡವಳಿಗಳ ಬಗ್ಗೆ ಚರ್ಚಿಸಿ ಈ ಬಗ್ಗೆ ವಿವಿಧ ಇಲಾಖೆಗಳಿಂದ ಕೈಗೊಂಡ ಕ್ರಮಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಪಾಲಿಕೆ ವತಿಯಿಂದ ವಾರ್ಡ್‌ಗೆ ಕೋವಿಡ್-19 ಲಸಿಕೆ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ ರವರೊಂದಿಗೆ ಚರ್ಚಿಸಿ ಯಾವ ರೀತಿ ಲಸಿಕೆಯನ್ನು ಹಂಚಿಕೆ ಮಾಡಲಾಗುವುದು ಎಂಬ ಬಗ್ಗೆ ಮಾಹಿತಿಯನ್ನು ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಯವರು ಕೇಳಿದರು ಮೊದಲು ಕೋರನಾ ವಾರಿಯರ್ಸ್ ಹಾಗೂ ಬಿ.ಬಿ.ಎಂ.ಪಿ ಸಿಬ್ಬಂದಿಗಳಿಗೆ ನೀಡಲಾಗುತ್ತಿದೆ ಹಾಗೂ ಸಾರ್ವಜನಿಕರಲ್ಲಿ ಲಸಿಕೆಯನ್ನು ಪಡೆಯಲು ಹೆಚ್ಚಿನ ಅರಿವು ಮೂಡಿಸಲು ಹಾಜರಿದ್ದ ಸಾರ್ವಜನಿಕ ಪ್ರಮುಖ ಮುಖಂಡ ಮತ್ತು ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಶನ್ ರವನ್ನು ಕೋರಲಾಯಿತು. ಮುಂದುವರಿದು ಹಾಜರಿದ್ದ ಸಾರ್ವಜನಿಕರಲ್ಲಿ ಎಲ್ಲರೂ ಮುಖಗೌಸ್‌ಗಳನ್ನು ಕಡ್ಡಾಯವಾಗಿ ಧರಿಸಲು ಸೂಚಿಸಬೇಕೆಂದು ಕೋರಿದರು ಮತ್ತು ಮೊದಲನೇ ಅಧ್ಯತೆಯನ್ನು ಕೋವಿಡ್-19 ಗೆ ಒತ್ತು ನೀಡುವಂತೆ ಸೂಚಿಸಿರುತ್ತಾರೆ.

ಹಿಂದಿನ ವಾರ್ಡ್ ಸಭೆಯ ನಡವಳಿಗಳನ್ನು ಚರ್ಚಿಸಲಾಗಿರುತ್ತದೆ.

1) ಟಿ.ಜಿ.ಬಡಾವಣೆಯಲ್ಲಿ ಒಳಚರಂಡಿ ದುರಸ್ಥಿಯನ್ನು ತುರ್ತಾಗಿ ನಿರ್ವಹಿಸಲು ಸೂಚಿಸಲಾಗಿರುತ್ತದೆ.
2) ಕಂದಾಯ ಅಧಿಕಾರಿಗಳೊಂದಿಗೆ ಚರ್ಚಿಸಿ ಶೇಕಡ 70 % ಕಂದಾಯ ವಸೂಲಾಗುತ್ತಿದ್ದು, ಉಳಿದ ಕಂದಾಯವನ್ನು ವಸೂಲು ಮಾಡಲು ಸೂಚಿಸಲಾಗಿದೆ.
3) ಹೊಸಕೆರೆಹಳ್ಳಿ ಕೆರೆಕೋಡಿಯಲ್ಲಿ ಸೊಳ್ಳೆ ಔಷಧಿಯನ್ನು ಸಿಂಪಡಿಸುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.
4) ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆದಾರರನ್ನು ಮುಂದಿನ ಸಭೆಗೆ ಹಾಜರಾಗಲು ಸೂಚಿಸಲಾಗಿರುತ್ತದೆ.
5) ಸಾರ್ವಜನಿಕರ ಶೌಚಾಲಯಗಳನ್ನು 1) ಹೊಸಕೆರೆಹಳ್ಳಿ ಕೆರೆಕೋಡಿ 2) ಮುಕಾಂಬಿಕಾನಗರ 3) ದ್ವಾರಕಾನಗರ ಹಾಗೂ 4) ಟಿ.ಜಿ.ಬಡಾವಣೆಯಲ್ಲಿ ನಿರ್ಮಿಸಲು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ

ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು

ವಾರ್ಡ್ 161 ರ ನೋಡಲ್ ಅಧಿಕಾರಿ.

ದಿನಾಂಕ:- 03-04-2021 ರಂದು ವಾರ್ಡ್.ನಂ. 161ರ ಕ್ರಿಯಾಯೋಜನೆ 21/22 ಆಯವ್ಯಯ ಸಭೆಯ ವಾರ್ಡ್ ಕಮಿಟಿ ಸದಸ್ಯರು ಹಾಜರಾತಿ:-

| ಕ್ರ.ಸಂ | ಹೆಸರು | ಮೊಬೈಲ್ ಸಂಖ್ಯೆ. | ಸಹಿ. |
|---|---|---|---|
| 1 | T.Sm. Dharanandas Kumar. | 9480683058 | T.Sm. [signature] 03/04/2021 |
| 2 | Dr. Nagabhushan | 636143 6039. | [signature] |
| 3. | Dhanalakshmi. K.r. | 9916044711 | [signature] JJW-161 |
| 4 | G. Suresh. (JJW. 161) | 9060038884 | [signature] |
| 5. | Sowbhagya. | 9945702534 | [signature] |
| 6. | Venkatamalavaiah KS AE | 9738888988 | [signature] |
| 7 | J. KESHAVA | 8050693339 | [signature] J |
| 8. | H. Hanumanthanarayanappa | 9620824449 | [signature] |
| 9. | Rajashekara. C.R. | 8277889687 | [signature] |

D A31 · ©JK